ಮಂತ್ರಿಮಂಡಲದಲ್ಲಿ ಆಗಲಿ, ನಮ್ಮಲ್ಲಿಯಾಗಲಿ, ಖಂಡಿತ ಭಿನ್ನಾಭಿಪ್ರಾಯ ಇಲ್ಲ. ನಿಮಗೂ ನಮಗೂ ಭಿನ್ನಾಭಿಪ್ರಾಯ ಇಲ್ಲದಿದ್ದಾಗ ನಮ್ಮನಮ್ಮ ಒಳಗೆ ಭಿನ್ನಾಭಿಪ್ರಾಯ ಎಲ್ಲಿ ಬರುತ್ತದೆ ಹೇಳಿ. ನನ್ನ ಮೇಲೆ ನಂಬಿಕೆ ಇಡಿ. ಇದರ ಮೇಲೆ ತಾವು ಏನೇನು ಕೇಳಿದ್ದೀರಿ, ಈ ಬಗ್ಗೆ ಆದಷ್ಟು ಜಾಗ್ರತೆಯಾಗಿ ಕಾರ್ಯಕ್ರಮ ಕೈಗೊಂಡು ಮುಂದಿನಸಾರಿ ನಿಮಗೆಲ್ಲರಿಗೂ ವ್ಯವಸ್ಥಿತವಾಗಿ ಕ್ರಮ ಕೈಗೊಂಡಿರುವುದನ್ನು ತಿಳಿಸುತ್ತೇನೆ.

(ಈ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ.

+ ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೇ, ಆರೋಗ್ಯ ಇಲಾಖೆ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡ 70ಕ್ಕೂ ಹೆಚ್ಚು ಭಾಗ ವಾಸಮಾಡತಕ್ಕ ಜನತೆಗೆ ಮತ್ತು ಪಟ್ಟಣ ಪ್ರದೇಶದ ಬಡ ಜನರಿಗೆ ಅತ್ಯಂತ ಮಹತ್ತರ ಪಾತ್ರವನ್ನು ವಹಿಸಬೇಕಾದ ಸನ್ನಿವೇಶ . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಹೊಸದಾಗಿ ಮೊದಲನೆಯ ಸಲ ಉತ್ತರ ಹೇಳುತ್ತಿದ್ದಾರೆ. ಪತ್ರಿಕೆಯವರೂ ಇಲ್ಲ. ಏಕೆಂದರೆ, ಅನೇಕ ಯೋಜನೆಗಳು, ಮತ್ತು ಕೆಲಸಗಳನ್ನು ಹೇಳ ಬೇಕಾದರೆ, ಇವು ಜನರಿಗೂ ಗೊತ್ತಾಗಬೇಕಲ್ಲ. ಅದಕ್ಕಾಗಿ ನಾಳೆ ಪ್ರಾರಂಭ ಮಾಡಿದರೆ ಒಳ್ಳೆಯದು. ನನಗೇನೂ ಅಭ್ಯಂತರವಿಲ್ಲ. ನಿಮಗಿಂತ ಹೆಚ್ಚು ವೇಳೆ ಕೊಡುತ್ತೇನೆ. ಬೆಳಿಗ್ಗೆ 9-30ಕ್ಕೆ ಬಂದರೆ, ಸಭೆ ಮುಗಿಯುವರೆಗೂ ಇರುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- ನಿಮಗೆ ಸಮಾಧಾನ ತಂದರೆ ಸಾಕು. ಬಾಕಿಯವರಿಗೆ ಬೇಡ.

ಡಾ: ಎಂ.ಪಿ. ಕರ್ಕಿ:- ಊಟದ ವ್ಯವಸ್ಥೆ ಏನಾದರೂ ಮಾಡಿದ್ದೀರೋ?

ಅಧ್ಯಕ್ಷರು:- ಊಟದ್ದು, ಮಲಗುವುದು ನನ್ನ ಜವಾಬ್ದಾರಿ ಅಲ್ಲ. ಬಹಳ ಹೆಚ್ಚು ಎಂದರೆ ಊಟಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೇನೆ. ಆಮೇಲೆ ಬೇರೆ ಏನನ್ನೂ ಕೇಳಬೇಡಿ. ನಿಮ್ಮಷ್ಟಕ್ಕೆ ನೀವು ಹೋಗಬೇಕಾಗುತ್ತದೆ.

ಡಾ: ಹೆಚ್.ಸಿ. ಮಹದೇವಪ್ಪ:- ಅನೇಕ ಮಾನ್ಯ ಗೌರವಾನ್ವಿತ ಸದಸ್ಯರು ಉತ್ತಮವಾದ ಸಲಹೆಗಳನ್ನು ಈ ಇಲಾಖೆಯ ಸುಧಾರಣೆ ಮತ್ತು ಈ ಇಲಾಖೆಯ ಸೇವಾಭಾವನೆಯಲ್ಲಿ ತೊಡಗ-ಬೇಕಾದಂಥ ರೀತಿನೀತಿಗಳ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಹಿಂದಿನ ಆರೋಗ್ಯ ಮಂತ್ರಿಗಳಾದಂಥ ಡಾ: ಮಲಕಾರೆಡ್ಡಿಯವರು, ಈ ಇಲಾಖೆಯನ್ನು ನಡೆಸತಕ್ಕ ಸಂದರ್ಭದಲ್ಲಿ ಈ ಇಲಾಖೆಯು ಎದುರಿಸತಕ್ಕ ಸಮಸ್ಯೆಗಳನ್ನು ಹೇಳಿರತಕ್ಕಂಥ ಮಾತುಗಳಲ್ಲಿ ಸತ್ಯಾಂಶ ಇದೆ. ಅನೇಕ ಮಾನ್ಯ ಸದಸ್ಯ-ರುಗಳು, ಈ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ, ಕಟ್ಟಡಗಳ ಕೊರತೆ, ವೈದ್ಯರು ಗ್ರಾಮೀಣ ಪ್ರದೇಶಗಳಲ್ಲಿ ವಾಸ ಮಾಡುತ್ತಾ ಇಲ್ಲ ಎಂದು ಹೇಳಿದರು. ಶೇಕಡ 10 ಭಾಗ ಹಣವನ್ನು ಆರೋಗ್ಯ

ಇಲಾಖೆಗೆ ವ್ಯಯ ಮಾಡಬೇಕು. ತನ್ಮೂಲಕ ರಾಜ್ಯದ ಜನತೆಯ ಆರೋಗ್ಯವನ್ನು ಸಂರಕ್ಷಣೆ ಮಾಡಬೇಕೆಂಬ ವಿಶ್ಲೇಷಣೆಯನ್ನೂ ಕೂಡ ಮಾನ್ಯ ಮಲಕಾರೆಡ್ಡಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದಾರೆ. ಜಿ.ಡಿ.ಪಿ. ಎಂದರೆ, ಗ್ರಾಸ್ ಡೆಮಾಕ್ರಟಿಕ್ ಪ್ರಾಡೆಕ್ಟ್‌ನಲ್ಲಿ ಶೇಕಡ 6ರಷ್ಟು ಹಣವನ್ನು ವ್ಯಯ ಮಾಡತಕ್ಕಂಥ ಸಂದರ್ಭದಲ್ಲಿ ಶೇಕಡ 1ರಷ್ಟು ಮಾತ್ರ ಆರೋಗ್ಯದ ಮೇಲೆ ಖರ್ಚು ಮಾಡುವ ಸರ್ಕಾರ ಅಥವಾ ಸಾರ್ವಜನಿಕರಿಂದ ಆರೋಗ್ಯವನ್ನು ಎಲ್ಲರಿಗೂ ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳತಕ್ಕಂಥ ಮಾತು ಒಂದು ಕಡೆಯಾದರೆ, ಕಳೆದ ವರ್ಷ ಸುಮಾರು 212 ಕೋಟಿ, 68 ಲಕ್ಷ 79 ಸಾವಿರ ಕೊಟ್ಟಿದ್ದಂಥ ಸರ್ಕಾರ ಈ ಸಾರಿ 1996-97ನೇ ಸಾಲಿಗೆ 326.54 ಲಕ್ಷ ಹಣವನ್ನು ಆಯವ್ಯಯದಲ್ಲಿ ಕೊಡುವುದರ ಮೂಲಕ ಶೇಕಡ 14 ಪರ್ಸೆಂಟ್ ಕಾದಿರಿಸಿಕೊಂಡು, ಇನ್‌ಫ್ಲೇಷನ್ 8 ಆದರೂ ಕೂಡ 6 ಪರ್ಸೆಂಟ್ ಹೆಚ್ಚುಮಾಡಿ, ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿಯನ್ನು ಕೊಡತಕ್ಕಂಥ, ಒತ್ತನ್ನು ಕೊಡತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಈ ವಿಚಾರವನ್ನು ಸನ್ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇತ್ತೀಚೆಗೆ ವಿಶ್ವಬ್ಯಾಂಕ್ 4 ರಾಜ್ಯಗಳಾದಂಥ ಆಂಧ್ರಪ್ರದೇಶ, ಕರ್ನಾಟಕ, ಪಂಜಾಬ್ ಮತ್ತು ಪಶ್ಚಿಮಬಂಗಾಳಗಳ ಸರ್ಕಾರಗಳು ಆರೋಗ್ಯ ರಕ್ಷಣೆ ಮೇಲೆ ಮಾಡತಕ್ಕಂಥ ಬಂಡವಾಳದ ಮೇಲೆ ಅಧ್ಯಯನವನ್ನು ಮಾಡತಕ್ಕಂಥ ಸಂದರ್ಭದಲ್ಲಿ 1993-94ನೇ ಸಾಲಿನಲ್ಲಿ ಪಂಜಾಬಿನಲ್ಲಿ ಆದಾಯದ ವೆಚ್ಚ, ಆರೋಗ್ಯದ ಮೇಲೆ 100 ರೂಪಾಯಿ ಕರ್ನಾಟಕ 90 ರೂಪಾಯಿ ಮತ್ತು ಪಶ್ಚಿಮಬಂಗಾಳ 72 ರೂಪಾಯಿ ಹಾಗೂ ಆಂಧ್ರ ಪ್ರದೇಶ 65 ರೂಪಾಯಿಗಳನ್ನು ಖರ್ಚುಮಾಡತಕ್ಕಂಥ ತಲೆವಾರು ಖರ್ಚನ್ನು ನೋಡಿದಾಗ ಗಣನಿಯ ಪ್ರಮಾಣದಲ್ಲಿ ಕರ್ನಾಟಕ ಸರ್ಕರ ವೆಚ್ಚಮಾಡುತ್ತಿದೆ ಎಂಬುದನ್ನು ಹೇಳುವುದರ ಜೊತೆಗೆ, ನೆರೆ ರಾಷ್ಟ್ರಗಳಾದ ಚೈನಾ, ಶ್ರೀಲಂಕಾ ಮತ್ತು ಇನ್ನಿತರ ರಾಷ್ಟ್ರಗಳು ಆರೋಗ್ಯದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ಸಂದರ್ಭದಲ್ಲಿ ಕೇಂದ್ರ ಆರೋಗ್ಯ ಕೌನ್ಸಿಲ್‌ನಲ್ಲಿ ಶೇಕಡ 10 ಭಾಗ ಹಣವನ್ನು ವ್ಯಯ ಮಾಡಬೇಕೆಂಬ ಒತ್ತಾಯವನ್ನು ಕೇಂದ್ರ ಸರ್ಕಾರದ ಈಗಾಗಲೇ ಒಂದು ನಿರ್ಣಯವನ್ನು ಮಾಡಿರತಕ್ಕಂತಾದ್ದು ಮತ್ತು ಕರ್ನಾಟಕ ಸರ್ಕಾರ ತನ್ನ ರಾಜ್ಯದ ಆರೋಗ್ಯದ ಆಯವ್ಯಯದಲ್ಲಿ ಶೇಕಡ 5 ರಿಂದ 10 ಭಾಗವನ್ನು ಕುಟುಂಬ ಕಲ್ಯಾಣ ಖರ್ಚುಮಾಡುತ್ತಿರುವ ಏಕೈಕ ರಾಜ್ಯ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ರಾಜ್ಯ ಸರ್ಕಾರ ಪ್ರಾಥಮಿಕ ಮತ್ತು ಸೆಕೆಂಡರಿ ಆರೋಗ್ಯದ ಬಗ್ಗೆ ಹೆಚ್ಚು ಮಹತ್ವವನ್ನು ಕೊಟ್ಟು, ಹಂತ ಹಂತವಾಗಿ ಅವುಗಳನ್ನು ಸುಭದ್ರವಾಗಿ ಮಾಡತಕ್ಕಂಥದ್ದರ ಜೊತೆಗೆ ಮೂರನೇ ಅಥವಾ ನರ್ಸರಿ ಆಸ್ಪತ್ರೆಗಳನ್ನು ಸರ್ಕಾರ ಮತ್ತು ಸರ್ಕಾರೇತರ ಜಂಟಿ ಯೋಜನೆಗಳನ್ನು ಸ್ಥಾಪನೆ ಮಾಡಲಿಕ್ಕೆ ವಿಶೇಷವಾದಂಥ ಆಲೋಚನೆಯನ್ನು ಇಟ್ಟುಕೊಂಡಿದ್ದೇವೆ. ಕುಟುಂಬ ಕಲ್ಯಾಣದ ಕಾರ್ಯಕ್ರಮಗಳು ರಾಜ್ಯದಲ್ಲಿ ಜಾರಿಗೆ ಬಂದಮೇಲೆ ಸುಮಾರು ಒಂದು ಸಾವಿರಕ್ಕೆ 65 ಶಿಶು ಮರಣ, ಮತ್ತು 24.9 ಜನನ ಪ್ರಮಾಣವನ್ನು ನಾವು ಮಾಡಿದ್ದೇವೆ. ಒಂದು ದಶಕಕ್ಕಿಂತ ಶಿಶು ಮರಣ 73ಕ್ಕಿಂತ ಕಡಿಮೆ ಇಳಿದೇ ಇಲ್ಲ. ಮತ್ತು ಜನನ ಪ್ರಮಾಣ ಕಳೆದ ಒಂದು ದಶಕಗಳಲ್ಲಿ 28ನ್ನು

ಬಿಟ್ಟು ಇಳಿಯಲೇ ಇಲ್ಲ. 1965-66ನ್ನು ತೆಗೆದುಕೊಂಡರೆ ಶಿಶುಮರಣ, ಸಾವಿರಕ್ಕೆ 65ರ ವರೆಗೆ ಇಳಿದಿರತಕ್ಕಂಥಾದ್ದು ಮತ್ತು ಜನನ 24.9 ಇದು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಬಂದಿರತಕ್ಕಂಥಾದ್ದನ್ನು ಇವತ್ತು ನಾವು ಕಾಣಬಹುದಾಗಿದೆ. ಇದು ನಿಜವಾಗಿಯೂ ಉತ್ತಮವಾದಂಥ ಬೆಳವಣಿಗೆ, ಈ ವಿಭಾಗದಲ್ಲಿ ಆಗಿದೆ ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಸಭಾಧ್ಯಕ್ಷರೇ, ನಾನು ಹೆಚ್ಚು ವಿವರಗಳಿಗೆ ಹೋಗದೇ ಅನೇಕ ಹೊಸ ಯೋಜನೆಗಳನ್ನು, ಹಳದಿ ಕಾರ್ಡುಗಳ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಸಮಾಜಕ್ಕೆ ಉಚಿತ ಚಿಕಿತ್ಸೆ ಮತ್ತು ಔಷಧೋಪಚಾರ ಕೊಡುವುದನ್ನು ರಾಷ್ಟ್ರದಲ್ಲೇ ಪ್ರಥಮಬಾರಿಗೆ ನಾವು ಎಲ್ಲಾ ಜಿಲ್ಲೆಗಳಲ್ಲೂ ಕೂಡ ಪ್ರಾರಂಭ ಮಾಡುತ್ತಿದ್ದೇವೆ. ಇದರ ಜೊತೆಗೆ, ಮುಖ್ಯಮಂತ್ರಿಗಳ ಕಾರ್ಪಸ್ ಫಂಡ್, 100 ಕೋಟಿ ರೂಪಾಯಿಗಳ ಫಂಡನ್ನು ಸ್ಥಾಪನೆ ಮಾಡಿ, ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಜನರಿಗೂ ಕೂಡ ಮಾರಕ ರೋಗಗಳಿಗೆ ಶುಶ್ರೂಷೆಯನ್ನು ಕೊಡತಕ್ಕಂಥ ನೂತನವಾದ ಯೋಜನೆಯನ್ನು ಸರ್ಕಾರದಲ್ಲಿ ಮಾಡಿ ಈಗಾಗಲೇ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕೇಂದ್ರ ಸರ್ಕಾರ ತನ್ನ ಆಯವ್ಯಯ ಮಂಡನೆ ಮಾಡತಕ್ಕ ಸಂದರ್ಭದಲ್ಲಿ ಉಳಿದ 90 ಕೋಟಿ ರೂಪಾಯಿಗಳನ್ನು ದಾನಿಗಳಿಂದ ಸಂಗ್ರಹ ಮಾಡತಕ್ಕ ಸಂದರ್ಭದಲ್ಲಿ, ದಾನಿಗಳು ಕೊಡತಕ್ಕ ಹಣಕ್ಕೆ ನೂರಕ್ಕೆ ನೂರು ಟ್ಯಾಕ್ಸ್ ಫ್ರೀ ಮಾಡಿರತಕ್ಕ ಉದಾಹರಣೆಯನ್ನು ನಾವು ನೋಡಿದಾಗ ಹಿಂದಿನ ಮುಖ್ಯಮಂತ್ರಿಗಳು ಸ್ವತಃ ಈ ಯೋಜನೆಯಲ್ಲಿ ಆಸಕ್ತಿ ವಹಿಸಿ, ಬಡತನ ರೇಖೆಗಿಂತ ಕೆಳಗಡೆ ಇರತಕ್ಕಂಥ ಬಡಜನರ ಪ್ರಾಣವನ್ನು ಸಂರಕ್ಷಣೆ ಮಾಡುವಂಥ ಕೆಲಸದ ಜೊತೆಗೆ, ರಾಷ್ಟ್ರೀಯ ಆರೋಗ್ಯ ಕೌನ್ಸಿಲ್‌ನಲ್ಲಿ ಒಂದು ಯೋಜನೆಯನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಅಂದಿನ ಆರೋಗ್ಯ ಮಂತ್ರಿಗಳಾದಂಥ ಎ.ಆರ್. ಅಂತುಲೆಯವರು ರಾಷ್ಟ್ರೀಯ ಕೌನ್ಸಿಲ್‌ನಲ್ಲಿ 300 ಕೋಟಿ ರೂಪಾಯಿಗಳ ಒಂದು ವಿನೂತನ ಯೋಜನೆಗೆ ಮಂಜೂರಾತಿ ಕೊಟ್ಟಿರುವುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರ ಜೊತೆಯಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಮೌಖಿಕವಾಗಿ ಹೇಳಿದರು. ಈ ಯೋಜನೆಗೆ ಕೇಂದ್ರದ ವತಿಯಿಂದ 10 ಕೋಟಿ ರೂಪಾಯಿಗಳನ್ನು ಕೊಡುತ್ತೇನೆ. ಇಲ್ಲಿರತಕ್ಕ ಹಣವನ್ನು ನೀವು ಡಿಪಾಸಿಟ್ ಮಾಡಿ, ಬಡ್ಡಿಯಿಂದ ಬಡಜನರ ಪ್ರಾಣದ ಸಂರಕ್ಷಣೆ ಮಾಡಬೇಕೆಂದು ಹೇಳಿಹೋಗಿದ್ದಾರೆ. ಇಂತಹ ಸಂದರ್ಭದಲ್ಲಿ ಈ ರಾಜ್ಯ ಸರ್ಕಾರಕ್ಕೆ ಇರತಕ್ಕ ಕಾಳಜಿಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಈಗಾಗಲೇ ಅನೇಕ ಯೋಜನೆಗಳು ನಮ್ಮ ರಾಜ್ಯಕ್ಕೆ ಮಂಜೂರಾಗಿರುವುದನ್ನು ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ. ಜರ್ಮನಿ ದೇಶದ ನೆರವಿನಿಂದ ಗುಲ್ಬರ್ಗಾ ವಿಭಾಗದಲ್ಲಿ ಒಟ್ಟು 47 ತಾಲ್ಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಯೋಜನೆಯ ವೆಚ್ಚ ಒಟ್ಟು 80 ಕೋಟಿ. ಈ ಹಣವನ್ನು ಈ ಕೆಳಕಂಡಂತೆ ಖರ್ಚು ಮಾಡಲು ಉದ್ದೇಶಿಸಲಾಗಿದೆ. ಇದು ಸಾಲುವುದಿಲ್ಲ, ಗ್ರಾಂಟ್ ರೂಪದಲ್ಲಿ ಕೊಡುತ್ತಿದ್ದಾರೆ. ಆಸ್ಪತ್ರೆಗಳ ಕಟ್ಟಡಗಳ ದುರಸ್ತಿ, ಆಸ್ಪತ್ರೆಗಳ ಸಂಖ್ಯೆ 21, ವೆಚ್ಚ 194.34

ಲಕ್ಷ ರೂಪಾಯಿಗಳು. ಹೊಸ ಕಟ್ಟಡ ನಿರ್ಮಾಣ, ಆಸ್ಪತ್ರೆ ವಿಸ್ತರಣೆ, ಸಂಖ್ಯೆ 26 ಇದಕ್ಕೆ ತಗಲತಕ್ಕಂಥ ವೆಚ್ಚ 1295 ಲಕ್ಷಗಳು. ಗುಲ್ಬರ್ಗಾ ವಿಭಾಗದಲ್ಲಿ ಈಗಿರುವ ಹಾಸಿಗೆಗಳ ಸಂಖ್ಯೆಯನ್ನು 3136 ರಿಂದ 4442ಕ್ಕೆ ಹೆಚ್ಚಿಸಲಾಗುವುದು. ಅಂದರೆ ಸುಮಾರು 1306 ಹಾಸಿಗೆಗಳ ಸವಲತ್ತುಗಳನ್ನು ಈಗಾಗಲೇ ಈ ವಿಭಾಗದಲ್ಲಿ ಹೆಚ್ಚು ಮಾಡಲು ಕ್ರಮ ಕೈಗೊಳ್ಳಲಾಗಿದೆ. ಸಲಕರಣೆಗಳಿಗಾಗಿ 6 ಕೋಟಿ ರೂಪಾಯಿಗಳು, ವಾಹನಗಳಿಗಾಗಿ 84 ಲಕ್ಷ ರೂಪಾಯಿಗಳು, ಹೆಚ್ಚುವರಿ ಸಿಬ್ಬಂದಿ ಸಂಬಳಗಳಿಗಾಗಿ 350 ಕೋಟಿ ರೂಪಾಯಿಗಳನ್ನು ಈ ಯೋಜನೆಗಳಡಿಯಲ್ಲಿ ನಾವು ಈಗಾಗಲೇ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ವಿಶ್ವಬ್ಯಾಂಕ್ ನೆರವಿನಿಂದ, ಬೆಂಗಳೂರು, ಮೈಸೂರು, ಬೆಳಗಾವಿ ವಿಭಾಗದ ಜಿಲ್ಲಾಮಟ್ಟದ 201 ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಿ, ಸೇವಾ ಸೌಲಭ್ಯವನ್ನು ವಿಸ್ತರಿಸುವ ಸಲುವಾಗಿ, ಸುಮಾರು 546 ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇವೆ. ಈ ಕೆಳಕಂಡಂತೆ ನಾವು ವೆಚ್ಚ ಮಾಡಲಿಕ್ಕೆ ಯೋಜನೆಯನ್ನು ಹಾಕಲಾಗಿದೆ. ಆಸ್ಪತ್ರೆಗಳ ಕಟ್ಟಡಗಳ ಅಭಿವೃದ್ಧಿ ಸಂಖ್ಯೆ ದುರಸ್ತಿಗಾಗಿ 81 ಸಂಖ್ಯೆ. ಅದಕ್ಕೆ ತಗಲತಕ್ಕಂಥ ವೆಚ್ಚ 27.535 ಕೋಟಿ ರೂಪಾಯಿಗಳು. ವಸತಿ ಗೃಹಗಳ ದುರಸ್ತಿಗಾಗಿ 1457 ಸಂಖ್ಯೆ. 3.43 ಕೋಟಿ ರೂಪಾಯಿಗಳು ವಸತಿ ಗೃಹಗಳ ನಿರ್ಮಾಣ ಮತ್ತು ಆಸ್ಪತ್ರೆಗಳ ವಿಸ್ತರಣೆ 120 ಸಂಖ್ಯೆ. 62.82 ಕೋಟಿ ರೂ.ಗಳ ಹೊಸ ವಸತಿ ಗೃಹಗಳ ನಿರ್ಮಾಣ ವೈದ್ಯರಿಗೆ 235, ಶುಶ್ರೂಷಕರಿಗೆ 395, 4ನೇ ದರ್ಜೆ ನೌಕರರಿಗೆ 373, ಇದಕ್ಕೆ ತಗಲತಕ್ಕಂಥ ವೆಚ್ಚ 27.02 ಕೋಟಿ ರೂ.ಗಳು. ಈಗ ಇರುವ ಹಾಸಿಗೆಗಳ ಸಂಖ್ಯೆಯನ್ನು 15,642 ರಿಂದ 19,105 ಹಾಸಿಗೆಗಳಿಗೆ ಹೆಚ್ಚಿಸಲಾಗುವುದು. ಈ ಯೋಜನೆಗಳಿಗೆ ಈ ಕೆಳಕಂಡಂತೆ ಹಣವನ್ನು ವೆಚ್ಚ ಮಾಡಲಾಗುವುದು. ವೈದ್ಯಕೀಯ ಸಲಕರಣೆಗಳಿಗೆ 34 ಕೋಟಿ ಇತರೇ ಸಲಕರಣೆಗಳು 32 ಕೋಟಿ, ವಾಹನಗಳು 15 ಕೋಟಿ, ತರಬೇತಿಗೆ 10 ಕೋಟಿ, ಹೊಸ ಸಿಬ್ಬಂದಿಯವರ ಸಂಬಳ 50 ಕೋಟಿ, ಹೊಸ ಸಿಬ್ಬಂದಿ ಅಂದರೆ, ಮಾನ್ಯ ಅಧ್ಯಕ್ಷರೇ ಸುಮಾರು 4 ಸಾವಿರಕ್ಕೂ ಹೆಚ್ಚು ಹೊಸ ಸಿಬ್ಬಂದಿಗೆ ವೇತನವನ್ನು ಅವರ ಅಪಾಯಿಂಟ್ ಮಾಡಿ ಈ ಯೋಜನೆಯಲ್ಲಿ ಕೊಡತಕ್ಕಂಥಾದ್ದು, the beauty of the world bank health scheme is, the provision for jobs and maintenance for five years. This is the beauty of the scheme, Sir. 30 ಪರ್ಸೆಂಟ್ ಗ್ರಾಂಟ್ ಇದೆ. ಉಳಿದಂಥಾದ್ದು 20 ವರ್ಷಗಳ ನಂತರ ರೀ ಪೇ ಮಾಡುವುದು ಗೌರ್ನಮೆಂಟ್ ಆಫ್ ಇಂಡಿಯಾಗೆ. ಗ್ಯಾರೆಂಟಿ ಇರತಕ್ಕಂಥಾದ್ದು ಮತ್ತು ಇಂಟ್ರಿಸ್ಟ್ ಫ್ರೀ ಇರತಕ್ಕಂಥಾ ಲೋನ್. ಮತ್ತು ಐ.ಪಿ.ಪಿ. 9ರಲ್ಲಿ ಸುಮಾರು 122 ಕೋಟಿ ರೂಪಾಯಿಗಳನ್ನು 13 ಜಿಲ್ಲೆಗಳಲ್ಲಿ ಪ್ರಾಥಮಿಕ ಕೇಂದ್ರಗಳು ಮತ್ತು ಉಪ ಕೇಂದ್ರಗಳನ್ನು ಕಟ್ಟಲಿಕ್ಕೆ ಇದೆ. ಅದನ್ನು ಹೇಳುತ್ತೇನೆ ಮಾನ್ಯ ಅಧ್ಯಕ್ಷರೇ, ಏಕೆಂದರೆ ಅನೇಕ ಜನ ಮಾನ್ಯ ಸದಸ್ಯರುಗಳು ಕಟ್ಟಡಗಳು ಇಲ್ಲ ಸಿಬ್ಬಂದಿಗಳು ಇಲ್ಲ ಅಂತ ಹೇಳಬೇಕಾದರೆ ಈ ಯೋಜನೆಗಳನ್ನು ಪಡೆದು ಇಷ್ಟೊಂದು ಬೃಹತ್ ಪ್ರಮಾಣದ ಹಣವನ್ನು ರಾಜ್ಯ ಸರ್ಕಾರ ಹೊಂದಿರಲಿಕ್ಕೆ ಸಾಧ್ಯವಾಗುವಂತಹ ಸಂದರ್ಭದಲ್ಲಿ ಉಪಕೇಂದ್ರಗಳ ಕಟ್ಟಡಗಳನ್ನು ಕಟ್ಟಲಿಕ್ಕೆ ಇರತಕ್ಕಂಥಾದ್ದು 1039. ಇದಕ್ಕೆ ತಗಲತಕ್ಕಂಥ ವೆಚ್ಚ 2343.70 ಕೋಟಿ ಪ್ರಾಥಮಿಕ

ಆರೋಗ್ಯ ಕೇಂದ್ರಗಳ ನಿರ್ಮಾಣ 94. 733.20 ಲಕ್ಷ. ಡಾಕ್ಟರ್‌ಗಳ ವಸತಿ ಗೃಹಗಳು 270. ಅದಕ್ಕೆ 831.60 ಲಕ್ಷ. ದುರಸ್ತಿ ಕಾರ್ಯಗಳು, ಉಪಕೇಂದ್ರಗಳು 2071. ತಗಲತಕ್ಕಂಥ ಖರ್ಚು 4202.49. ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ 327. ಅದಕ್ಕೆ ತಗುಲತಕ್ಕ ವೆಚ್ಚ, ತರಬೇತಿ 1725.95 ಲಕ್ಷ, ಈ ರೀತಿಯಲ್ಲಿ ಸುಮಾರು 122 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರ ಜೊತೆಗೆ ಎಲ್ಲಾ ಜಿಲ್ಲೆಗಳಲ್ಲಿ ನಾವು ತರಬೇತಿ ಸಂಸ್ಥೆಗಳನ್ನು ಪ್ರಾರಂಭ ಮಾಡಿ ಸುಮಾರು 2 ಸಾವಿರ ಎ.ಎಸ್.ಎಮ್ಸ್. ಮತ್ತು ಇತರೇ ಸಿಬ್ಬಂದಿಗಳಿಗೆ ವಾಹನಗಳನ್ನು ಕೊಂಡುಕೊಳ್ಳುವುದು ಇಂಟ್ರೆಸ್ಟ್ ಫ್ರೀ ಲೋನ್ ಕೊಡುವಂತಹ ಬೃಹತ್ ಯೋಜನೆ ಕೂಡ ಇದರಲ್ಲಿ ಸೇರಿದೆ. ಎ.ಎನ್.-ಎಮ್. ಟ್ರೈನಿಂಗ್ ಸೆಂಟರ್ ಮತ್ತು ಸ್ಟೇಟ್ ಟ್ರೈನಿಂಗ್ ಸೆಂಟರ್ ಕೊಟ್ಟು ಅವರ ಜ್ಞಾನವನ್ನು ಇಂಪ್ರೂವ್ ಮಾಡುವುದಕ್ಕೆ ಅಗತ್ಯವಾದ ಕಾರ್ಯಕ್ರಮಗಳನ್ನು ಈ ಯೋಜನೆಯಡಿಯಲ್ಲಿ ತರುವುದರ ಜೊತೆಗೆ, ರಾಯಚೂರಿಲ್ಲಿ ಒಂದು ಹೈಟೆಕ್ ಇನ್‌ಸ್ಟಿಟ್ಯೂಶನ್ ಅನ್ನು ಪ್ರಾರಂಭ ಮಾಡಿ ಒಪೆರಾ ನೆರವಿನಡಿಯಲ್ಲಿ ಸುಮಾರು 29 ಕೋಟಿ ರೂಪಾಯಿಗಳ ಗ್ರ್ಯಾಂಟ್‌ನ್ನು 120 ಹಾಸಿಗೆಗಳ ಆಸ್ಪತ್ರೆಯನ್ನು 250 ಹಾಸಿಗೆಗಳಿಗೆ ಪರಿವರ್ತನೆ ಮಾಡಲಾಗಿದೆ. ಮತ್ತು 350 ಹಾಸಿಗೆಗಳ ಇನ್ನೊಂದು ಆಸ್ಪತ್ರೆಯನ್ನು ಸ್ಥಾಪಿಸಿ, ಇದಕ್ಕೆ ಎಲ್ಲಾ ಸೌಲಭ್ಯಗಳನ್ನು ಸ್ಥಾಪಿಸಿ ಹೈಟೆಕ್ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡಿರತಕ್ಕಂಥ ವಿಷಯವನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ. ಪಲ್ಸ್ ಪೋಲಿಯೋ ಸಕ್ಸಸ್ ಆದ ಮೇಲೆ ನಮ್ಮ ರಾಜ್ಯದಲ್ಲಿ ಕೇವಲ 2 ಅಥವಾ ಮೂರು ಮಾತ್ರ ನಮ್ಮ ರಾಜ್ಯದಲ್ಲಿ ವರದಿ ಆಗಿವೆ. ಡಿಸೆಂಬರ್‌ನಿಂದ ಮತ್ತೆ 5 ವರ್ಷಗಳ ಮಕ್ಕಳಿಗೆ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡುವುದರ ಜೊತೆಗೆ ಶಾಲಾ ಮಕ್ಕಳಿಗೆ ಆರೋಗ್ಯ ತಪಾಸಣೆಯನ್ನು ಮಾಡುವಂಥ ಕಾರ್ಯಕ್ರಮವನ್ನು 40 ಸಾವಿರ ಶಾಲಾ ಮಕ್ಕಳಿಗೆ ವಿದ್ಯಾ ಇಲಾಖೆ ಮತ್ತು ಆರೋಗ್ಯ ಇಲಾಖೆ ವತಿಯಿಂದ ಹಮ್ಮಿಕೊಂಡು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಖಾಲಿ ಇರತಕ್ಕಂಥ ಹುದ್ದೆಗಳನ್ನು ತುಂಬಲಿಕ್ಕೆ ನಾವು ಈಗಾಗಲೇ ಕಾರ್ಯಾರಂಭ ಮಾಡಿದ್ದೇವೆ. ನಮಗೆ ಮಂಜೂರಾಗಿರತಕ್ಕಂಥ ಹುದ್ದೆಗಳು 58 ಸಾವಿರ, ಅದರಲ್ಲಿ 48 ಸಾವಿರ ಹುದ್ದೆಗಳು ಇವೆ. ಇನ್ನುಳಿದ 10 ಸಾವಿರ ಹುದ್ದೆಗಳನ್ನು ನಾಲ್ಕುವರೆ ಸಾವಿರ ಹುದ್ದೆಗಳನ್ನು ತುಂಬಲಿಕ್ಕೆ ಸರ್ಕಾರ ಅನುಮತಿಯನ್ನು ಕೊಟ್ಟಿದೆ ಅವರು ಕಾರ್ಯಾರಂಭ ಮಾಡಿದ್ದಾರೆ. ಇನ್ನುಳಿದ ಹುದ್ದೆಗಳನ್ನು ತುಂಬಲಿಕ್ಕೆ ಇನ್ನು 6 ತಿಂಗಳಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ವರ್ಲ್ಡ್ ಬ್ಯಾಂಕ್‌ನವರು 4 ಸಾವಿರ ಹುದ್ದೆಗಳನ್ನು ತುಂಬಲಿಕ್ಕೆ ಮತ್ತು ಅದರ ಮೈಂಟನೆನ್ಸ್‌ನ್ನು ಮಾಡಲು 58 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದರಿಂದ ನಮಗೆ 5 ವರ್ಷದವರೆಗೂ ಯಾವುದೇ ತೊಂದರೆ ಇಲ್ಲ. ಈಗಾಗಲೇ ಅನೇಕ ಸಂದರ್ಭಗಳಲ್ಲಿ ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುವಂತಹ ಸಂದರ್ಭಗಳಲ್ಲಿ ಬೇರೆ ಬೇರೆ ಕಾರ್ಯಕ್ರಮಗಳನ್ನು, ಇಲಾಖೆ ಕಾರ್ಯಕ್ರಮಗಳನ್ನು ಅವರಿಗೆ ಹೇಳಿದ್ದೇನೆ. ಇವತ್ತು ಇನ್ನೂ ಅನೇಕ ಜನ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸಂಜಯಗಾಂಧಿ ಆಸ್ಪತ್ರೆಯ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. 1992ನೇ ಇಸವಿಯಲ್ಲಿ

ಅಲ್ಲಿರತಕ್ಕಂಥ ಒಬ್ಬ ನಿರ್ದೇಶಕರು ಒಬ್ಬ ಪ್ಲಾಸ್ಟಿಕ್ ಸರ್ಜನ್ ಆಗಿದ್ದರು. ಬೌರಿಂಗ್ ಆಸ್ಪತ್ರೆಯಿಂದ ಅಲ್ಲಿಗೆ ಡೆಪ್ಯುಟ್ ಆದರು. 1992ನೇ ಇಸವಿಯಲ್ಲಿ ಅವರು ರಾಜಿನಾಮೆಯನ್ನು ಕೊಟ್ಟಮೇಲೆ 5 ವರ್ಷಗಳ ಕಂಟ್ರಾಕ್ಟ್ ಆಧಾರದ ಮೇಲೆ ಅವರನ್ನು ಅಲ್ಲಿಗೆ ನೇಮಕ ಮಾಡಲಾಗಿದೆ. ಡಿವಿಜನಲ್ ಕಮೀಷನರ್ ಅಲ್ಲಿ ವಿಚಾರಣೆ ಮಾಡಿ ಏನು ವರದಿಯನ್ನು ಸಲ್ಲಿಸಿದ್ದಾರೆ ಅಲ್ಲಿಗೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಬೇಕು ಅಂತ, ಅದರ ಪ್ರಕಾರ ನಾನು ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇನೆ. ಯಾವ ಉದ್ದೇಶದಿಂದ ಈ ಸಂಸ್ಥೆ ಸ್ಥಾಪನೆ ಆಯಿತೋ ಆ ಉದ್ದೇಶವನ್ನು ಈಡೇರಿಸುವುದಕ್ಕೆ ನಾನು ನನ್ನ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಇನ್ನು ಜಯದೇವ ಕಾರ್ಡಿಯಾಲಜಿಯಲ್ಲಿ ಅಪಾಯಿಂಟ್‌ಮೆಂಟ್ಸ್ ಕೊಡುವ ಬಗ್ಗೆ ಮಾನ್ಯ ಸದಸ್ಯರಾದ ರಾಮದಾಸ್ ಅವರು ಪ್ರಸ್ತಾಪ ಮಾಡಿದ್ದಾರೆ. ಅದೊಂದು ಅಟಾನಮಸ್ ಸಂಸ್ಥೆ ಆಗಿದ್ದು, ಅಲ್ಲಿನ ನಿರ್ದೇಶಕರು ಅಲ್ಲಿ ಬೆಳೆಯುತ್ತಾ ಇರತಕ್ಕಂಥ ಒಂದು ಸಣ್ಣ ಸಂಸ್ಥೆಗೆ ad hoc ಆಧಾರದ ಮೇಲೆ ನೇಮಕ ಮಾಡಲಿಕ್ಕೆ ಅಧಿಕಾರ ಇದೆ. ಗೌರ್ನಿಂಗ್ ಕೌನ್ಸಿಲ್ ಸುಮಾರು 10 ವರ್ಷ 5 ವರ್ಷ 4 ವರ್ಷ 2 ವರ್ಷ 1 ವರ್ಷ ಹೀಗೆ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಾ ಇರತಕ್ಕಂಥ ನೌಕರರು ಒತ್ತಾಯ ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ರೋಸ್ಟರ್ ಪದ್ಧತಿಯನ್ನು ಅಳವಡಿಸಿ ಅವರ ಉದ್ಯೋಗವನ್ನು ಖಾಯಂ ಮಾಡಲಿಕ್ಕೆ ಆ ಒಂದು ಅಟಾನಮಸ್ ಸಂಸ್ಥೆ ಜನರಲ್ ಕೌನ್ಸಿಲ್‌ನಲ್ಲಿ ತೀರ್ಮಾನ ಆಗಿದೆ. ಯಾವ ಕಾಯ್ದೆಯನ್ನು ಉಲ್ಲಂಘನೆ ಮಾಡದೇ ರೋಸ್ಟರ್ ಸಿಸ್ಟಂ ಅನ್ನು ಮೈಂಟೈನ್ ಮಾಡಿ ಮಾಡಿದೆ. ಅದರ ಜೊತೆಗೆ ವೀರಪ್ಪ ರೆಡ್ಡಿಯವರನ್ನು ಡಿಸ್‌ಮಿಸ್ ಮಾಡಿದ ಮೇಲೂ ಪುನರ್ ನೇಮಕ ಮಾಡಿದ್ದೀರಿ ಎನ್ನುವ ಮಾತನ್ನು ಕೂಡ ಮಾನ್ಯ ಸದಸ್ಯರು ಹೇಳಿದ್ದಾರೆ. ವೀರಪ್ಪ ರೆಡ್ಡಿಯವರು ರಿಪೋರ್ಟ್ ಮಾಡಿಕೊಂಡಿಲ್ಲ, ಕೋರ್ಟಿನಲ್ಲಿ ಕೂಡ ಕೇಸು ಇದೆ, ಹೀಗಾಗಿ ಅವರು ರಿಪೋರ್ಟ್ ಮಾಡಿಕೊಳ್ಳದೇ ಇರುವುದರಿಂದ ಅದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡದೇ ಮತ್ತು ಮೈಸೂರಿನಲ್ಲಿ ಮಂಜೂರಾಗಿದ್ದ ಸಂಜಯ ಗಾಂಧಿ ಆಸ್ಪತ್ರೆಯನ್ನು ಬೆಂಗಳೂರಿಗೆ ವರ್ಗಾವಣೆ ಮಾಡಿದ್ದೀರಿ ಎನ್ನುವಂತಹ ಮಾತನ್ನು ಸಹ ಅವರು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಅನೇಕ ಹೈಟೆಕ್ ಆಸ್ಪತ್ರೆಗಳು ಮತ್ತು ಆಧುನಿಕ ಅಟಾನಮಸ್ ಇನ್‌ಸ್ಟಿಟ್ಯೂಶನ್ಸ್ ಇರುವುದರಿಂದ ಇಲ್ಲಿ ಹೆಚ್ಚು ಅನುಕೂಲ ಆಗುತ್ತಿದೆ ಅಂತ ಹೇಳಿ ಮತ್ತು ಇಲ್ಲಿರತಕ್ಕಂಥ ಪ್ರೊಫೆಸರ್‌ಗಳಿಗೆ ಅವರ ನಾಲೇಡ್ಜ್ ಇಂಪ್ರೂವ್ ಮಾಡಿಕೊಳ್ಳುವುದಕ್ಕೆ ಮತ್ತು ಲೇಟೆಸ್ಟ್ ಜರ್ನಲ್ಸ್ ಎಲ್ಲಾ ಪಡೆದು ಅನುಕೂಲ ಆಗಲಿ ಅಂತ ಹೇಳಿ ಆ ಕಾರ್ಯಕ್ರಮವನ್ನು ಮಾಡಿದ್ದೇವೆ. ಜೊತೆಗೆ ಮೈಸೂರಿನ ಮೆಡಿನೋವ ರಕ್ತನಿಧಿಯಿಂದ ಮತ್ತು ವಿಜಯ ರಕ್ತನಿಧಿಯಿಂದ ಎರಡು ಬಾಟಲ್ ರಕ್ತವನ್ನು ಮಾನ್ಯ ಸದಸ್ಯರು ಇಲ್ಲಿ ಪ್ರದರ್ಶನವನ್ನು ಮಾಡಿದ್ದಾರೆ. ಆ ಎರಡು ರಕ್ತದ ಬಾಟಲ್‌ನ್ನು ವಿಕ್ಟೋರಿಯಾ ಸರ್ವಿಲೆನ್ಸ್ ಆಸ್ಪತ್ರೆಗೆ ಕಳುಹಿಸಿ ಟೆಸ್ಟ್ ಮಾಡಿದಾಗ ಎರಡೂ ಕೂಡ ಎಯ್ಡ್ಸ್ ನೆಗೆಟೀವ್ ಆಗಿರತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತರುವುದರ ಜೊತೆಗೆ 4-1-96ರ ಸುಪ್ರೀಂ ಕೋರ್ಟಿನ ಆಜ್ಞೆಯ ಅನುಸಾರವಾಗಿ ರಾಜ್ಯದ ಎಲ್ಲಾ ಬ್ಲಡ್ ಬ್ಯಾಂಕ್‌ಗಳನ್ನು ಆಧುನೀಕರಣಗೊಳಿಸಿ

ಸುಸಜ್ಜಿತವಾಗಿ 7 ಕೊಠಡಿಗಳ ಕಟ್ಟಡವನ್ನು ಮಾಡಬೇಕೆನ್ನುವ ಸೂಚನೆಯ ಆಧಾರದ ಮೇಲೆ ಒಂದು ರಕ್ತ ನಿಧಿ ಲೈಸೆನ್ಸ್‌ನ್ನು ರದ್ದು ಮಾಡಿದ್ದೇವೆ. ಮತ್ತೊಂದು ಅದರ ಆಕ್ಟಿವಿಟೀಸ್‌ನ್ನು ನಾವು ನಿಲ್ಲಿಸಿದ್ದೇವೆ. ಇದರ ಜೊತೆಗೆ ಕೆ.ಆರ್. ಆಸ್ಪತ್ರೆಯಲ್ಲಿ ಎರಡು ಔಷಧಿಗಳನ್ನು ಹೆಚ್ಚು ಬೆಲೆಗೆ ಕೊಟ್ಟಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. Nafentrin manufactured by John West, Bombay, ಮಾನ್ಯ ಅಧ್ಯಕ್ಷರೆ ಕೆ.ಆರ್. ಆಸ್ಪತ್ರೆಗೆ ಇರತಕ್ಕಂಥ ಬಜೆಟ್ ಕೇವಲ 1.42 ಕೋಟಿ. ಅದರಲ್ಲಿ ಚಿಲುವಾಂಬಗೆ ಸ್ವಲ್ಪ ಭಾಗ ಹೋಗುತ್ತದೆ. ಉಳಿದಂತೆ ಸೂಪರಿನ್‌ಟೆಂಡೆಂಟ್‌ಗೆ ವಾರ್ಷಿಕ 15 ಸಾವಿರ ರೂಪಾಯಿಗಳಿಗೆ ಮಾತ್ರ ಅಧಿಕಾರ ಇರತಕ್ಕಂಥಾದ್ದು ಲೋಯೆಸ್ಟ್ ಕೊಟೇಶನ್ ಅನ್ನು ನೋಡಿ, ಸಂದರ್ಭಾನುಸಾರ ಅವರು ಪರ್ಚೇಸ್ ಮಾಡಬೇಕಾಗುತ್ತದೆ. ಆಪರೇಶನ್ ಮಾಡತಕ್ಕಂಥ ಸಂದರ್ಭಗಳಲ್ಲಿ ಒ.ಟಿ.ಗಳಲ್ಲಿ ಬ್ಲಡ್‌ಪ್ರೆಜರ್ ಮೈಂಟೈನ್ ಮಾಡುವಂಥಾದ್ದು ಅನೆಸ್ಥೇಸಿಯ ಕೊಡುವಂತಹ ಸಂದರ್ಭಗಳಲ್ಲಿ ಸುಮಾರು 50 ಎಂ.ಎಲ್.ನ 30 ವಾಯಲ್‌ಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ 52 ರೂಪಾಯಿಗಳು ಇದ್ದದ್ದನ್ನು 155 ರೂಪಾಯಿಗಳ ಸ್ಟಿಕ್ಕರ್ ಅಂಟಿಸಿ ತೆಗೆದುಕೊಂಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಒಂದು ವಾಯಿಲ್ ಸಿಕ್ಕಿದೆ ಅವರು ಆ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ಆಗಿರತಕ್ಕಂಥಾದ್ದು ಒಂದು ಅಥವಾ ಎರಡು ಸಾವಿರ ಇರಬಹುದು, ಅದರಲ್ಲಿ ವೈದ್ಯರ ತಪ್ಪೇನು ಅದರಲ್ಲಿ ಕಂಡು ಬಂದಿಲ್ಲ. ಈ ವಾಯಲ್‌ನ್ನು ಸೀಜ್ ಮಾಡಿ ಅವರ ಲೈಸೆನ್ಸ್‌ನ್ನು ಕ್ಯಾನ್ಸಲ್ ಮಾಡಬಹುದು ಅಥವಾ ಕ್ರಿಮಿನಲ್ ಕೇಸ್ ಹಾಕಲಿಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದೆ. ಮತ್ತೆ ಇನ್ನೊಂದು ಔಷಧಿ ಬಗ್ಗೆ ನಮಗೆ ಏನು ಸಿಗಲಿಲ್ಲ. ಕೇವಲ 500 ವಾಯಲ್‌ಗಳನ್ನು ಪಡೆದು ಡ್ರಗ್ ಇಲಾಖೆಯವರು ಕ್ರಮ ತೆಗೆದುಕೊಳ್ಳುವಂತೆ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಡ್ರಗ್ ಇಲಾಖೆಯಲ್ಲಿ ಕೇವಲ 300 ಸ್ಯಾಂಪಲ್‌ಗಳು ಮಾತ್ರ ಉಳಿದಿದ್ದು ಹೊರಗಡೆ ಕಡಿಮೆ ಹಣದಲ್ಲಿ ಅದನ್ನು ಅನಾಲಸಿಸ್ ಮಾಡಬಹುದು. ಇಲ್ಲಿ ಸಾವಿರಾರು ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದರೂ ಸರ್ಕಾರದಲ್ಲಿ ಲಯಬಿಲಿಟಿ ಪ್ರಶ್ನೆ ಇರುವುದರಿಂದ ಹೊರಗಡೆಯವರನ್ನು ಹೆಚ್ಚು ನಂಬಲಿಕ್ಕೆ ಆಗುವುದಿಲ್ಲ ಜೊತೆಗೆ ಕೇಂದ್ರ ಸರ್ಕಾರ ಬೆಳಗಾಂನಲ್ಲಿ ನಮ್ಮದೇ ಆದಂಥ ಒಂದು ಲ್ಯಾಬೋರೇಟರಿಯನ್ನು ಮಂಜೂರಾತಿ ಮಾಡಿರುವುದರಿಂದ ಅನೇಕ ಸಮಸ್ಯೆಗಳನ್ನು ಈ ಇಲಾಖೆ ಇವತ್ತು ಎದುರಿಸಿದರೂ ಕೂಡ ಔಷಧಿಯ ಖರೀದಿ ವಿಭಾಗದಲ್ಲಿ ಅನೇಕ ಸಂದರ್ಭಗಳಲ್ಲಿ ಗೊಂದಲಗಳು ಇದ್ದಂತಹ ಸಂದರ್ಭಗಳಲ್ಲಿ ಆ ಮನೆಯಲ್ಲಿ ಸದನದ ಸಮಿತಿಯನ್ನು ಮಾಡಿ ಈ ಇಲಾಖೆಯಲ್ಲಿ ಸುಮಾರು ಒಂದೂವರೆ ದಶಕಕ್ಕೂ ಹೆಚ್ಚು ಕಾಲ ತನ್ನ ಬೆರಳಿನಲ್ಲಿ ಕುಣಿಸುತ್ತಿದ್ದಂತಹ ವ್ಯಕ್ತಿಯನ್ನು ಹಿಡಿದು ಜೈಲಿಗೆ ಹಾಕಿ, ನಿಜವಾಗಿ ಪ್ರಾಮಾಣಿಕತೆ ಈ ಇಲಾಖೆಯಲ್ಲಿ ಇದೆ ಎನ್ನುವಂತಹ ಮಾತನ್ನು ನಾನು ಹೇಳುತ್ತಾ ಮಾನ್ಯ ಸದಸ್ಯರುಗಳು ಮಾಡಿರತಕ್ಕಂಥ ಎಲ್ಲಾ ಉತ್ತಮವಾದ ಸಲಹೆಗಳನ್ನು ಗಮನದಲ್ಲಿ ಇಟ್ಟುಕೊಂಡು ಖಾಲಿ ಇರತಕ್ಕಂಥ ಸಿಬ್ಬಂದಿಯನ್ನು ಇನ್ನೂ 6 ತಿಂಗಳಲ್ಲಿ ತುಂಬಲಿಕ್ಕೆ ಪ್ರಯತ್ನ ಮಾಡುತ್ತಾ ಉತ್ತಮ ಸಲಹೆಗಳನ್ನು ನಾನು ಎಲ್ಲಾ ಸಂದರ್ಭಗಳಲ್ಲಿ ಪಡೆಯುತ್ತಾ ಈ ಇಲಾಖೆಯ ಮೂಲಕ ರಾಜ್ಯದ ಜನರಿಗೆ ಒಳಿತನ್ನು ಮಾಡುತ್ತೇನೆ. ಇದಕ್ಕೆ ತಮ್ಮೆಲ್ಲರ

ಸಹಕಾರವನ್ನು ಕೋರುತ್ತಾ ಈ ಇಲಾಖೆಯನ್ನು ಪಕ್ಷಾತೀತವಾಗಿ ನೋಡುತ್ತಾ, ವಿವಿಧ ಯೋಜನೆಗಳ ಮೂಲಕ ಪಕ್ಷಾತೀತವಾಗಿ ಎಲ್ಲಾ ತಾಲ್ಲೂಕಿನ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವಂತಹ ಮತ್ತು ದುರಸ್ತಿಯನ್ನು ಮಾಡುವಂತಹದ್ದರ ಜೊತೆಗೆ ಆಧುನೀಕರಣ ಸಲಕರಣೆಗಳನ್ನು ಕೊಡುವಂಥ ಕಾರ್ಯಕ್ರಮವನ್ನು ಈಗ ಹಾಕಿಕೊಂಡಿರುವುದರ ಜೊತೆಗೆ ಅಧಿವೇಶನ ಮುಗಿಯುವುದರೊಳಗೆ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಮಾಹಿತಿಗಳನ್ನು ಕೊಡುತ್ತೇನೆಂದು ತಮ್ಮ ಮೂಲಕ ತಿಳಿಸಿ, ಮಾನ್ಯ ಸದಸ್ಯರು 29ನೇ ನಂಬರ್ ಇರುವ ಆರೋಗ್ಯ ಇಲಾಖೆ ಬೇಡಿಕೆಗೆ ತಮ್ಮ ಅನುಮೋದನೆಯನ್ನು ಕೊಡಬೇಕೆಂದು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

8.40 ಪಿ.ಎಂ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೆ, ಈ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡ ತಕ್ಕಂಥ ಸಂದರ್ಭದಲ್ಲಿ, ನೂರು ರೂಪಾಯಿನ ಒಂದು ವಯಲ್‌ಗೆ 155 ರೂಪಾಯಿಗಳನ್ನು ವಿಧಿಸಿರುವುದನ್ನು ಸನ್ಮಾನ್ಯ ಸಚಿವರು ಪ್ರಾಮಾಣಿಕವಾಗಿ ಹೇಳಿರುವುದರಿಂದ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆಮೇಲೆ ನಮ್ಮಲ್ಲಿರುವ ರೇಟ್ ಕಾಂಟ್ರಾಕ್ಟ್‌ನ್ನು ವಯಲೇಟ್ ಮಾಡಿ 21ರೂಪಾಯಿ ಬೆಲೆ ಬಾಳತಕ್ಕಂಥ ಔಷಧಿಯನ್ನು 43 ರೂಪಾಯಿ ಕೊಟ್ಟು ಕೊಂಡಿರುವುದರ ಬಗ್ಗೆಯೂ ಒಪ್ಪಿಕೊಂಡಿದ್ದಾರೆ. ನಾನು ಇದೊಂದು ಉದಾಹರಣೆ ಮಾತ್ರ ಕೊಟ್ಟಿದ್ದೇನೆ. ನಂತರ ಆ 8 ತಿಂಗಳಲ್ಲಿ 30 ಕೋಟಿ ರೂಪಾಯಿಗಳ ವ್ಯವಹಾರ ಏನು ನಡೆದಿದೆ ಅದರ ಬಗ್ಗೆ ತನಿಖೆ ಆಯೋಗ ಮಾಡಬೇಕೆಂದು ನಾವು ಕೇಳಿದ್ದೇವೆ, ಅದಕ್ಕಾಗಿ ಒಂದು ಸದನದ ಸಮಿತಿಯನ್ನು ಮಾಡಿದರೆ ಎಲ್ಲಾ ಟ್ರಾನ್ಸ್‌ಪೆರೆಂಟ್ ಆಗಿರುತ್ತದೆ. ಈ ರೀತಿ ತನಿಖಾ ಆಯೋಗವನ್ನು ಮಾಡಿದರೆ, ಏನು 800 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಹಾಕಿಕೊಳ್ಳಲಾಗಿದೆ, ಅದರಲ್ಲಿ ಯಾವುದೇ ರೀತಿ ಅಕ್ರಮವಾಗುವುದಿಲ್ಲವೆಂದು ಹೇಳುತ್ತೇನೆ. ಇನ್ನು ಎರಡನೆಯದಾಗಿ ಜಯದೇವಾ ಕಾರ್ಡಿಯಾಲಜಿ ಸಂಸ್ಥೆ ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ಇದೆಯಾ? ಅಥವಾ ಇಲ್ಲವಾ? ಅದಕ್ಕೆ ಸಂಪೂರ್ಣವಾದ ಹಣವನ್ನು ಸರ್ಕಾರ ಖರ್ಚು ಮಾಡುತ್ತಿದೆಯಾ? ಸ್ವಾಮ್ಯಯತೆ ಇರುವಂಥ ಸಂಸ್ಥೆಯಲ್ಲಿ ಸುಪ್ರೀಮ್ ಕೋರ್ಟ್ ಕೊಟ್ಟಿರತಕ್ಕಂಥ ಆರ್ಡರ್ ಪಾಲನೆಯಾಗುತ್ತದೆಯಾ ಅಥವಾ ಇಲ್ಲವಾ? 10 ವರ್ಷಗಳ ಕಾಲದಿಂದ ಕೆಲಸ ಮಾಡಿರತಕ್ಕಂಥವರನ್ನು ಖಾಯಂ ಮಾಡಲಾಗಿದೆ ಎನ್ನುವ ವಿಷಯವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ, 1996ನೇ ಇಸವಿಯಲ್ಲಿ ನೇಮಕಗೊಂಡ 63 ಜನರು ಕಾನೂನು ಪ್ರಕಾರ 240 ದಿವಸಗಳ ಕಾಲ ಕೆಲಸ ಮಾಡಿಲ್ಲದೇ ಇದ್ದರೂ ಅವರುಗಳನ್ನು ಪರ್ಮನೆಂಟ್ ಮಾಡುವುದಕ್ಕೆ ರೆಸಲ್ಯೂಷನ್ ಮಾಡಿದ್ದಾರೆ. ಈ ರೀತಿ ರೆಸಲ್ಯೂಷನ್ ಮಾಡಿರುವುದು ಆಕ್ರಮವಾದುದರಿಂದ ಅದರ ಬಗ್ಗೆ ಸಿ.ಓ.ಡಿ. ತನಿಖೆ ಮಾಡಬೇಕೆಂದು ಕೇಳಿದ್ದೆವು. ನೇಮಕಾತಿ ಮಾಡಿರುವುದರಲ್ಲಿ ಸುಪ್ರೀಮ್ ಕೋರ್ಟ್ ಆರ್ಡರ್ ವಯಲೇಟ್ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಹೇಳಲಿಲ್ಲ. ಅಲ್ಲಿ ಅನ್ಯಾಯವಾಗಿದೆಯೋ, ಇಲ್ಲವೋ ಎಂಬ ಬಗ್ಗೆ ತನಿಖೆ ಮಾಡುವುದರಿಂದ ವಿಷಯ ಗೊತ್ತಾಗಲಿ ಎಂದು ನಾವು ತನಿಖೆ ಮಾಡಬೇಕೆಂದು ಒತ್ತಾಯ ಮಾಡುತ್ತೇವೆ. ಆಮೇಲೆ ಸರ್ಕಾರಿ

ವೈದ್ಯರುಗಳು ಖಾಸಗಿ ಪ್ರಾಕ್ಟೀಸ್ ಮಾಡುವುದನ್ನು ನಿಲ್ಲಿಸಲಿಕ್ಕೆ ಒಂದು ಕಾನೂನು ತರುವ ಬಗ್ಗೆ ಮಾನ್ಯ ಸಚಿವರು ಏನನ್ನೂ ಹೇಳಲಿಲ್ಲ. ನಂತರ ಖಾಸಗಿ ನರ್ಸಿಂಗ್ ಹೋಮ್‌ಗಳ ಕಂಟ್ರೋಲ್ ಮಾಡುವ ಬಗ್ಗೆಯೂ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಉತ್ತರದಲ್ಲಿ ಹೇಳಲಿಲ್ಲ. ಕ್ಲಾಸ್ 3 ಮತ್ತು 4ನೇ ಎಂಪ್ಲಾಯಿಸ್‌ಗೆ ಟ್ರಾನ್ಸ್‌ಫರ್ಸ್ ಇಲ್ಲದೇ ಇದ್ದರೂ ಇನ್ನೂ ಮುಂದೆ ಅವರುಗಳನ್ನೂ ಟ್ರಾನ್ಸ್‌ಫರ್ ಮಾಡುವುದರ ಮೂಲಕ ಆಡಳಿತದಲ್ಲಿ ಚುರುಕು ಮಾಡಬೇಕೆನ್ನುವ ವಿಷಯವನ್ನು ಹೇಳಿದ್ದೆವು, ಆದರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆಂದೂ ಸಹಾ ಹೇಳಲಿಲ್ಲ. ಇನ್ನು ಬ್ಲಡ್ ಬ್ಯಾಂಕ್‌ಗಳ ವಿಚಾರ ಮಾಡಿ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಬ್ಲಡ್ ಬಾಟಲನ್ನು ಸದನದಲ್ಲಿ ಪ್ರದರ್ಶಿಸಿದ್ದೆ. ಇದನ್ನು ಏಕೆ ಹೇಳುತ್ತೇನೆಂದರೆ, ನಾನು ಬ್ಲಡ್ ಬ್ಯಾಂಕ್‌ಗೆ ಹೋದಂಥ ಸಂದರ್ಭದಲ್ಲಿ 45 ಬಾಟಲ್ ಬ್ಲಡ್‌ನ್ನು ಒಂದು ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿದ್ದರು, ಅದರಲ್ಲಿ ನಾನು ಎರಡು ಬಾಟಲ್ ಮಾತ್ರ ತೆಗೆದುಕೊಂಡು ಬಂದೆ. ಆ ಎಲ್ಲಾ 45 ಬಾಟಲ್‌ಗಳ ಬಗ್ಗೆಯೂ ನಮ್ಮ ಹತ್ತಿರ ಮಾಹಿತಿ ಇದೆ. ಆ 45 ಬಾಟಲ್ ಬ್ಲಡ್ ಏನಿತ್ತು? ಅದನ್ನು ಎರಡು ಸಲ ಸುರಿಯಲಾಗಿದೆ. ಆ ಬಗ್ಗೆ ಏನಾಯಿತು? ಮತ್ತು ಜನಗಳಿಂದ ಕಲೆಕ್ಟ್ ಮಾಡಿದ ಬ್ಲಡ್‌ನ್ನು ಯಾವ ಕಾರಣಕ್ಕಾಗಿ ವೇಸ್ಟ್ ಮಾಡಿದರು ಎಂಬ ಬಗ್ಗೆ ಮಾಹಿತಿ ಕೇಳಿದ್ದೆವು ಆ ಬಗ್ಗೆಯೂ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕು.

ಡಾ: ಎ.ಬಿ. ಮಲಕರೆಡ್ಡಿ:- ಮಾನ್ಯ ಅಧ್ಯಕ್ಷರೆ, ಹಿಂದೆ, ಐ.ಬಿ.ಬಿ. ಯೋಜನೆಯಡಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆರೋಗ್ಯ ಕೇಂದ್ರಗಳ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳನ್ನು ಕಟ್ಟಲಾಗಿದೆ. ಆ ಕಟ್ಟಡಗಳು ಕಂಪ್ಲೀಟ್ ಆಗಿ ಆರು ವರ್ಷಗಳಾದರೂ ಹೆಲ್ತ್ ಡಿಪಾರ್ಟ್‌ಮೆಂಟ್‌ನವರು ಇನ್ನು ಆ ಕಟ್ಟಡಗಳನ್ನು ವಶಕ್ಕೆ ತೆಗೆದು ಕೊಳ್ಳದೆ ಇರುವುದರಿಂದ ಆ ಕಟ್ಟಡಗಳನ್ನು ದುರಾವಸ್ಥೆಯಲ್ಲಿ ಇವೆ. ಈಗ ಜರ್ಮನ್ ಏಡ್ ಮತ್ತು ಐ.ಬಿ.ಬಿ. ನಿಂದ ಏಡ್ ತೆಗೆದುಕೊಂಡು ನೂರಾರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಡಗಳನ್ನು ಪುನಃ ಕಟ್ಟಲಾಗುತ್ತಿರುವುದರಿಂದ ಆ ಕಟ್ಟಡಗಳ ಗುಣ ಮಟ್ಟವನ್ನು ಕಾಯ್ದುಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಮಾನ್ಯ ಮಂತ್ರಿಯವರು ಹೇಳಬೇಕು. ಸುಮ್ಮನೆ ನೂರು ಕೋಟಿ ರೂಪಾಯಿಗಳಲ್ಲಿ ಕಟ್ಟಡ ಕಟ್ಟುತ್ತೇವೆಂದರೆ ಅರ್ಥವಿಲ್ಲ. ಹಿಂದೆ ಕಟ್ಟಿದ ಕಟ್ಟಡಗಳನ್ನೇ ಇನ್ನೂ ಆಕ್ಯುಪೈ ಮಾಡಿಕೊಂಡಿಲ್ಲ. ಮೊದಲು ಕಟ್ಟಿರತಕ್ಕಂಥ ಕಟ್ಟಡದ ಆಪರೇಷನ್ ಥಿಯೇಟರ್‌ಗಳಲ್ಲಿ ಇಟ್ಟಿರತಕ್ಕಂಥ ಕಿಟಕಿಗಳನ್ನು ಕ್ಲೋಸ್ ಮಾಡುವುದಕ್ಕೆ ಬರುವುದಿಲ್ಲ. ಬಾಗಿಲುಗಳನ್ನು ಮುಚ್ಚುವುದಕ್ಕಾಗುವುದಲ್ಲ, ಅಲ್ಲಿ ವಾಚ್‌ಮನ್‌ಗಳು ಇರುವುದಿಲ್ಲ, ಈಗ ಪ್ರತಿಯೊಂದು ಕಡೆ ಆರೋಗ್ಯ ಕೇಂದ್ರಗಳನ್ನು ಮತ್ತು ಉಪ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುತ್ತಿದೆ, ಆದರೆ, ಈ ಕೇಂದ್ರಗಳಿಗೆ ಮೂಲಭೂತವಾಗಿ ಬೇಕಾಗಿರುವ ಸಿಬ್ಬಂದಿಗಳನ್ನು ಮತ್ತು ಉಪಕರಣಗಳನ್ನು ಕೊಡುವುದಕ್ಕಾಗುವುದಿಲ್ಲ. ನನ್ನ ಅನುಭವದಲ್ಲಿ ಹೇಳಬೇಕಾದರೆ, ಹೋಮಿಯೋಪತಿ ಮತ್ತು ಆಯುರ್ವೇದಿಕ್ ವಿಧಾನಗಳೂ ಇವೆ. ಒಂದು ಲಕ್ಷ ಅಥವಾ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಹೋಮಿಯೋಪತಿ ವಿಧಾನದಿಂದ ಉತ್ತಮ ಆರೋಗ್ಯವನ್ನು ಜನರಿಗೆ ಕಲ್ಪಿಸುವುದಕ್ಕೆ ಸಾಧ್ಯವಾಗು-

ತ್ತದೆ. ಆದ್ದರಿಂದ, ಇಂಥಾ ಯೋಜನೆಗಳನ್ನು ಮಾಡುವುದಕ್ಕೆ ಸರ್ಕಾರದಲ್ಲಿ ಯೋಚನೆ ಮಾಡಲಾಗಿದೆಯೇ ಎಂದು ತಿಳಿಸಬೇಕು.

ಶ್ರೀ ಯು.ಆರ್. ಸಭಾಪತಿ:- ಸನ್ಮಾನ್ಯ ಸಭಾಧ್ಯಕ್ಷರೆ, ಸಂಜಯಗಾಂಧಿ ಆಸ್ಪತ್ರೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗುತ್ತದೆಂದು ಮಾನ್ಯ ಮಂತ್ರಿಯವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ನಾನು ಕೇಳಿದ್ದು ಆ ವಿಷಯವಲ್ಲ. ಅಲ್ಲಿ, ಕೃತಕ ಅಂಗ ಜೋಡಣೆಯ ಒಂದು ಘಟಕವನ್ನು ಮುಚ್ಚಿಬಿಟ್ಟಿದ್ದಾರೆ, ಎಷ್ಟೋ ದಾನಿಗಳು ಲಕ್ಷಾಂತರ ರೂಪಾಯಿಗಳ ಸಲಕರಣೆಗಳನ್ನು ದಾನ ರೂಪವಾಗಿ ಅಲ್ಲಿಗೆ ಕೊಟ್ಟಿದ್ದಾರೆ. ಇಡೀ ಏಷ್ಯಾದಲ್ಲೇ ಪ್ರಥಮವಾಗಿ ಸ್ಥಾಪಿಸಲ್ಪಟ್ಟಿದ್ದ ಇಂಥಾ ಘಟಕವನ್ನು ಮತ್ತೆ ತೆರೆಯುವ ಬಗ್ಗೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮ ಏನು? ಆಮೇಲೆ, ಅಲ್ಲಿನ ನಿರ್ದೇಶಕರು ವಾಲೆಂಟ್‌ರಿ ರಿಟೈರ್‌ಮೆಂಟ್ ತೆಗೆದುಕೊಂಡು ಹೋಗಿದ್ದರೂ ಪುನಃ ಅವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕರೆದುಕೊಂಡು ಬರಲಾಗಿದೆ. ಅವರ ಆಡಳಿತದಲ್ಲಿ ನಡೆದಿರತಕ್ಕಂಥ ಅನೇಕ ಅವ್ಯವಹಾರಗಳ ಬಗ್ಗೆ ವಿಷಯ ಸಮಿತಿಯು ವಿವರವಾದ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಅವರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಅಲ್ಲಿಂದ ಕಿತ್ತುಹಾಕುವ ಬದಲು ಅವರ ಜೊತೆಗೆ ಇನ್ನೊಬ್ಬ ಆಡಳಿತ ಅಧಿಕಾರಿಯನ್ನು ನೇಮಕ ಮಾಡಲಾಗುತ್ತದೆಂದು ಹೇಳಿರುವುದರಿಂದ ಇದರಲ್ಲಿ ನನಗೆ ಸಂಶಯ ಇದೆ. ಅವರ ಪರವಾಗಿ ಸರ್ಕಾರ ಇದೆಯೋ? ಇವತ್ತು ಆ ಸಂಸ್ಥೆ ಬೀದಿಪಾಲು ಆಗುವಂಥ ಪರಿಸ್ಥಿತಿಯಲ್ಲಿರುವಾಗ ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಸರ್ಕಾರ ಏಕೆ ತಳೆಯುವುದಿಲ್ಲ? ಆಮೇಲೆ, ಸರ್ಕಾರಿ ಆಸ್ಪತ್ರೆಯಲ್ಲಿರತಕ್ಕಂಥ ರೋಗಿಗಳಿಗೆ ಒಂದು ದಿನದ ಊಟ ಉಪಚಾರಕ್ಕೆ 5 ರೂಪಾಯಿಗಳನ್ನು ಕೊಡಲಾಗುತ್ತಿದೆ. ವೈಜ್ಞಾನಿಕವಾಗಿ ಇದು ಸಮಂಜಸವೇ ಎಂದು ನಾನು ಮಾನ್ಯ ಮಂತ್ರಿಯವರಲ್ಲಿ ಕೇಳುತ್ತೇನೆ. 5 ರೂಪಾಯಿಗಳಲ್ಲಿ ಒಬ್ಬ ರೋಗಿಗೆ ಒಂದು ದಿನಕ್ಕೆ ಬೇಕಾದ ಊಟ ತಿಂಡಿಯನ್ನು ಕೊಡಲು ಸಾಧ್ಯವಾಗುತ್ತಿದೆಯೇ ಎಂಬ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಯವರು ಕೊಡಬೇಕು.

ಡಾ।। ಹೆಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ರಾಜ್ಯದ ಬಜೆಟ್‌ನಲ್ಲಿ ಔಷಧಿ ಕೊಂಡುಕೊಳ್ಳುವುದಕ್ಕೆ 39 ಕೋಟಿ ರೂಪಾಯಿಗಳಲ್ಲಿ 32 ಕೋಟಿ ರೂಪಾಯಿಗಳು ಖರ್ಚಾಗಿರುವುದರಿಂದ ಮಾನ್ಯ ರಾಮದಾಸ್ ಹೇಳಿರುವ ವಿಷಯ ಆಗುವುದಕ್ಕೆ ಸಾಧ್ಯವಿಲ್ಲದಂಥದ್ದು. ಇಂಥಾ ಪ್ರಕರಣಗಳು ಕಂಡು ಬಂದರೆ ಅವರ ಲೈಸನ್ಸ್‌ನ್ನು ರದ್ದು ಮಾಡಲಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ಆರೋಗ್ಯ ಇಲಾಖೆಯ ಸುಧಾರಣೆಗೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಇದರಲ್ಲಿ ಯಾರ ಹಂಗೂ ನನಗೆ ಇಲ್ಲ. ನಿಷ್ಪಕ್ಷಪಾತದಿಂದ, ಪ್ರಾಮಾಣಿಕ ಕೆಲಸ ಮಾಡುತ್ತೇನೆ.

ಶ್ರೀ ಎ. ರಾಮದಾಸ್:- ಅವ್ಯವಹಾರಗಳ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದಾಗಲೂ ಫಲ ಸಿಗಲಿಲ್ಲವೆಂದರೆ ಇನ್ನೆಲ್ಲಿ ಪ್ರಸ್ತಾಪ ಮಾಡಬೇಕು? 45 ಬಾಟಲ್ ಬ್ಲಡ್‌ನ್ನು ಅವರು ಏಕೆ ಹಾಳು ಮಾಡಿ

ದರು? ಅದರ ಬಗ್ಗೆ ತನಿಖೆಯಾಗಲಿಲ್ಲವೆಂದರೆ ಮತ್ತು ಔಷಧಗಳ ಆಕ್ರಮಗಳ ಬಗ್ಗೆ ತನಿಖೆಯಾಗಲಿಲ್ಲವೆಂದರೆ ನಾವು ಏಕೆ ಇಲ್ಲಿ ಮಾತನಾಡಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ರಾಮದಾಸ್‌ರವರು ಇಷ್ಟೊಂದು ಕಷ್ಟಪಟ್ಟು ಕೆಲವೊಂದು ಇನ್‌ಫಾರ್ಮೇಶನ್‌ಗಳನ್ನು ತಂದು ಸಭೆಯಲ್ಲಿ ತಮ್ಮ ಗಮನಕ್ಕೆ ತಂದಿದ್ದಾರೆ. ಈ ರೀತಿಯ ತಪ್ಪುಗಳು ಆದಾಗ, ಈ ರೀತಿಯಾಗಿ ಬ್ಲಡ್ ಸಂಗ್ರಹಣೆ ಮಾಡಿರುವುದು ವ್ಯರ್ಥವಾದಾಗ ಅದರ ಮೇಲೆ ಸೂಕ್ತವಾದ ಕ್ರಮಗಳನ್ನು ನೀವು ತೆಗೆದುಕೊಳ್ಳದಿದ್ದರೆ ಇನ್ನು ಮುಂದೆ ಇಂಥ ವಿಚಾರಗಳನ್ನು ಅವರು ಪ್ರಸ್ತಾಪ ಮಾಡದೇ ಇರುವುದು ಒಳ್ಳೆಯದೆಂದು ಅಂದುಕೊಳ್ಳುತ್ತಾರೆ. ಅಲ್ಲದೆ ಸಂಬಂಧಪಟ್ಟ ಅಧಿಕಾರಿಗಳು ನಾವು ಏನು ಮಾಡಿದರೂ ನಡೆಯುತ್ತದೆ ಎಂಬ ಧೋರಣೆಯನ್ನು ತಳೆಯುತ್ತಾರೆ. ಹಾಗಾದರೆ ಇದು ಯಾವ ಮಟ್ಟಕ್ಕೆ ಹೋಗಿ ಮುಟ್ಟಬಹುದು ಎಂಬುದನ್ನು ಯೋಚನೆ ಮಾಡಿ.

ಡಾ|| ಹೆಚ್.ಸಿ. ಮಹದೇವಪ್ಪ:- ಕೆ.ಆರ್. ಆಸ್ಪತ್ರೆಯಲ್ಲಿರತಕ್ಕಂಥ ಬ್ಲಡ್ ಬ್ಯಾಂಕ್ ಲೈಸನ್ಸ್ಡ್ ಬ್ಲಡ್ ಬ್ಯಾಂಕ್ ಅಲ್ಲ. ಅದು ಸ್ಟೋರೇಜ್ ಮಾಡತಕ್ಕಂಥ ಬ್ಲಡ್ ಬ್ಯಾಂಕ್ ಕೂಡ ಅಲ್ಲ. ಆಪರೇಷನ್ ಕಾರ್ಯ ನಡೆಯುವಾಗ, ಎಮರ್ಜೆನ್ಸಿ ಬಂದಾಗ ಅವರ ಸಂಬಂಧಿಕರಿಂದ ರಕ್ತವನ್ನು ಪಡೆದು ಟ್ರಾನ್ಸ್‌ಫ್ಯೂಜನ್ ಮಾಡತಕ್ಕಂಥ ಒಂದು ಬ್ಲಡ್ ಬ್ಯಾಂಕ್ ಆದಾಗಿದೆ. ಹೀಗೆ ಟ್ರಾನ್ಸ್‌ಫ್ಯೂಜನ್ ಮಾಡತಕ್ಕಂಥ ಸಂದರ್ಭಗಳಲ್ಲಿ ಗ್ಲೂಕೋಸ್ ಇರಬಹುದು ಅಥವಾ ಬ್ಲಡ್ ಇರಬಹುದು, ಕೆಲವು ಸಂದರ್ಭ, ಸನ್ನಿವೇಶಗಳಲ್ಲಿ ಪೇಶಂಟ್ಸ್‌ಗೆ Rigors, chills ಮತ್ತು ಫೀವರ್ ಬರತಕ್ಕಂಥ ಸಂದರ್ಭಗಳಲ್ಲಿ ರೋಗಿಗೆ ಕೊಡುತ್ತಿದ್ದಂಥ ಬ್ಲಡ್‌ನ್ನು, ಗ್ಲುಕೋಸ್‌ನ್ನು ಅರ್ಧಕ್ಕೆ ತೆಗೆದು ಅದನ್ನು ವಾಪಸ್ ಕಳುಹಿಸುತ್ತಾರೆ. ಹೀಗೆ ತೆಗೆದ ಬ್ಲಡ್‌ನ್ನು ಬೇರೆಯವರಿಗೆ ಬಳಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ನಿಜವಾದಂಥ ಪರಿಸ್ಥಿತಿ. ಆದುದರಿಂದ ಅದು ಸ್ಟೋರ್ ಮಾಡತಕ್ಕಂಥ ಬ್ಲಡ್ ಬ್ಯಾಂಕ್ ಅಲ್ಲ. ಇದು ಲೈಸೆನ್ಸ್ಡ್ ಬ್ಲಡ್ ಬ್ಯಾಂಕ್ ಅಲ್ಲ ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ರಾಜ್ಯದ ಎಲ್ಲಾ ಬ್ಲಡ್ ಬ್ಯಾಂಕ್‌ಗಳನ್ನು ಆತ್ಯಾಧುನಿಕಗೊಳಿಸಿ ಕನಿಷ್ಟ ಎರಡು ಎ.ಸಿ. ರೂಮಗಳು ಮತ್ತು ಏಳು ಕೊಠಡಿಗಳಿರತಕ್ಕಂಥ ಸುಸಜ್ಜಿತ ಬ್ಲಡ್‌ಬ್ಯಾಂಕ್‌ನ್ನು ಮಾಡಬೇಕೆಂಬ ನಿರ್ದೇಶನವಿದ್ದು ಈಗ ಕೆ.ಆರ್. ಆಸ್ಪತ್ರೆಯ ಬ್ಲಡ್‌ಬ್ಯಾಂಕ್‌ನ್ನು ಕೂಡ ಪರಿವರ್ತನೆ ಮಾಡುತ್ತಾ ಇದ್ದೇವೆ. ಇದು ಅಲ್ಲಿನ ನಿಜವಾದಂಥ ಪರಿಸ್ಥಿತಿಯ ವಿಚಾರಗಳು ಇವುಗಳನ್ನು ತಮ್ಮ ಮುಂದೆ ವಿವರವಾಗಿ ನೀಡಿದ್ದೇನೆ. ಹಾಗೆಯೇ ರೋಗಿಗಳ ಊಟಕ್ಕೆಂದು ಐದು ರೂ.ಗಳನ್ನು ಕೊಡುತ್ತಿರುವುದು ನಿಜವಾಗಿಯೂ ಸಾಕಾಗುವುದಿಲ್ಲ. ಈ ಕುರಿತ ಒಂದು ಅಧ್ಯಯನ ನಡೆಸಿದ ಪ್ರಕಾರ ಸಾಧಾರಣ ಊಟಕ್ಕೆ 20 ರೂ.ಗಳು ಹಾಗೂ ಉತ್ಕೃಷ್ಟವಾದ ಊಟಕ್ಕೆ 40 ರೂ.ಗಳು ಎಂದು ತಿಳಿದು ಬಂದಿದೆ. ಈ 5 ರೂ.ಗಳು 1960ನೇ ಇಸವಿಯಲ್ಲಿ ನಿಗದಿಮಾಡಿರತಕ್ಕಂಥಾದ್ದು. ಅದನ್ನು ಈಗ ಹೆಚ್ಚಿಸಲು ನಾನು ಪರಿಶೀಲನೆ ಮಾಡುತ್ತಾ ಇದ್ದೇನೆ. ಅಂತೆಯೆ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಸಬ್‌ಸೆಂಟರ್‌ಗಳಲ್ಲಿ ಸಿಬ್ಬಂದಿ ವ್ಯವಸ್ಥೆ ಇಲ್ಲವೆಂದು ಹೇಳಿದ್ದಾರೆ. ಅಲ್ಲಿರುವ ಎ.ಎನ್.ಎಂ ಗೆ ಅಸಿಸ್ಟ್ ಮಾಡಲು ನೂರು ರೂ.ಗಳನ್ನು ಕೊಟ್ಟು ವ್ಯವಸ್ಥೆ ಮಾಡಿದ್ದೇವೆ. ಸುಮಾರು 2 ಸಾವಿರ

ವಹಿಕಲ್‌ಗಳನ್ನು ಕೊಟ್ಟು ಅಗತ್ಯವಿರುವ ಕಡೆಗಳಲ್ಲಿ ತಕ್ಷಣ ಹೋಗಬೇಕೆಂಬ ಒಂದು ವ್ಯವಸ್ಥೆಯನ್ನು ನಾವು ಇವೊತ್ತು ಇಲಾಖೆಯಲ್ಲಿ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಮಾನ್ಯ ಸಭಾಪತಿಯವರು ಹೇಳಿದ ಪ್ರಕಾರ ಸಂಜಯಗಾಂಧಿ ಅಪಘಾತ ಆಸ್ಪತ್ರೆಯ ಅಧ್ಯಕ್ಷರು ಯಾರೆಂದು ನನಗೆ ಗೊತ್ತಿಲ್ಲ. ಅದು 1992ರಲ್ಲಿ ಆಗಿರುವುದು. ಆ ವರದಿಯ ಆಧಾರದ ಮೇಲೆ ನಾನು ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲು ಪ್ರಾರಂಭ ಮಾಡಿದ್ದೇನೆ. ಯಾವ ಉದ್ದೇಶದಿಂದ ಆ ವಿಭಾಗವನ್ನು ಮಾಡಲಾಗಿತ್ತು ಅದನ್ನು ಈಡೇರಿಸಲು ಪ್ರಾಮಾಣಿಕವಾದ ಪ್ರಯತ್ನಗಳನ್ನು ನಾನು ಮಾಡುತ್ತೇನೆ.

(ಇ) ವಸತಿ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

+ ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆಯ ಕುರಿತಾಗಿ ಅನೇಕ ಮಾನ್ಯ ಹಿರಿಯ ಸದಸ್ಯರುಗಳು, ಮಾನ್ಯ ವಿರೋಧಿ ಪಕ್ಷದ ನಾಯಕರುಗಳು, ಮಾನ್ಯ ಹೆಚ್.ಎನ್. ನಂಜೇಗೌಡರು, ಶ್ರೀ ಸಗೀರ್ ಅಹಮ್ಮದ್‌ರವರು ಮತ್ತು ಇತರ ಅನೇಕ ಮಾನ್ಯ ಸದಸ್ಯರಗಳು ನಾನಾ ಸಲಹೆಗಳನ್ನು ನೀಡಿದ್ದಾರೆ. ಸಲಹೆಗಳನ್ನು ನೀಡಿದ ತಮಗೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇವೊತ್ತಿನ ದಿವಸ ವಸತಿ ಇಲಾಖೆಯು ಒಂದು ಪ್ರತ್ಯೇಕವಾದ ಇಲಾಖೆ. 22-11-1995ರಲ್ಲಿ ಈ ವಸತಿ ಇಲಾಖೆಯನ್ನು ಪ್ರತ್ಯೇಕವಾದ ಇಲಾಖೆ ಎಂದು ಮಾಡಿದರು. ವಸತಿ ಇಲಾಖೆಗೆ ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡಿದ್ದಾರೆ. ಈ ಕಾರ್ಯಕ್ಕಾಗಿ ಈ ಸರಕಾರಕ್ಕೆ ನಾವು ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಏಕೆಂದರೆ ವಸತಿ ಇಲಾಖೆಯ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ನಿರೂಪಣೆ ಮಾಡುವುದಕ್ಕೆ ಪ್ರತ್ಯೇಕವಾಗಿ ಕಾರ್ಯದರ್ಶಿಯವರು ಇರುವುದರ ಜೊತೆಗೆ ಕಳೆದ ಒಂದು ವಾರದ ಹಿಂದೆ ಜಿಲ್ಲಾವಾರು ಶಾಸಕರುಗಳ ಸಭೆಯನ್ನು ಕರೆದಾಗ ಅತ್ಯಮೂಲ್ಯವಾದ ಸಲಹೆಗಳನ್ನು ಎಲ್ಲರೂ ಕೊಟ್ಟು ಸಹಕರಿಸಿದ್ದಾರೆ. ಆ ಎಲ್ಲಾ ಸಲಹೆಗಳನ್ನು ತೆಗೆದುಕೊಂಡು ವಸತಿ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕಾಗಿದೆ. ಅದು ಆಶ್ರಯ, ಇಂದಿರಾ ಆವಾಸ್, ಸಮಾಜಕಲ್ಯಾಣ ಇಲಾಖೆಯ ಅಂಬೇಡ್ಕರ್ ಯೋಜನೆ ಮುಂತಾಗಿ ಇರಬಹುದು. ನಮ್ಮ ಇಲಾಖೆಗೆ ಆಶ್ರಯ ಯೋಜನೆ ಬಂದರೆ ಅಂಬೇಡ್ಕರ್ ಯೋಜನೆಗಳು ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರು ನೋಡಿಕೊಳ್ಳುತ್ತಾರೆ. ಇಂದಿರಾ ಆವಾಸ್ ಯೋಜನೆಯನ್ನು ಗ್ರಾಮೀಣ ಅಭಿವೃದ್ಧಿ ಕಾರ್ಯದರ್ಶಿಗಳ ಮುಖೇನ ಮಾಡುತ್ತೇವೆ. ಗೃಹನಿರ್ಮಾಣ ಮಂಡಳಿಯ ಮೂಲಕ ಅನುಷ್ಠಾನಗೊಳಿಸುವ ಹಲವಾರು ಯೋಜನೆಗಳು ಇವೆ. ಹಾಗೆಯೇ ಕೊಳಚೆ ಅಭಿವೃದ್ಧಿ ಮಂಡಳಿಯ ವಸತಿ ವ್ಯವಸ್ಥೆಯ ಯೋಜನೆಗಳು ನಮ್ಮ ಇಲಾಖೆಗೆ ಸೇರುತ್ತವೆ. ಈ ಇಲಾಖೆಯ ಕುರಿತಾಗಿ ಹಲವಾರು ದೂರುಗಳು ಇವೆ. ಹೌಸಿಂಗ್‌ಬೋರ್ಡ್‌ನ ಕಾಮಗಾರಿಗಳು ತುಂಬಾ ಕಳಪೆ ಕಾಮಗಾರಿಗಳಾಗಿವೆ ಎಂದು ಎಲ್ಲಾ ಮಾನ್ಯ ಸದಸ್ಯರುಗಳು ಸಲಹೆ ನೀಡಿದ್ದಾರೆ. ಅವರುಗಳಿಗೆ ಕೃತಜ್ಞತೆ ಸಲ್ಲಿಸಿ ಹೌಸಿಂಗ್‌ಬೋರ್ಡ್‌ನಲ್ಲಿ ಏನೇ ಅವ್ಯವಹಾರ ನಡೆದರೂ ಅದಕ್ಕೆ ಒಂದು ಸ್ಕ್ವಾಡ್‌ನ್ನು ಮಾಡಿ ಅದರ ಮೂಲಕ ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ಮುಂತಾದ ಯಾವುದೇ ವಸತಿ